# ಭಾರತೀಯ ಭಾಷಾ ಸಂಸ್ಥಾನ (ಸಿ.ಐ.ಐ.ಎಲ್.)

(ಶಿಕ್ಷಣ ಸಚಿವಾಲಯ)

ಉನ್ನತ ಶಿಕ್ಷಣ ಇಲಾಖೆ, ಭಾರತ ಸರ್ಕಾರ,

ಮಾನಸಗಂಗೋತ್ರಿ, ಹುಣಸೂರು ರಸ್ತೆ, ಮೈಸೂರು - 570006

**F.No.** **F.No. CESCK/ PD / Recruitment/2022** **Date 22/07/2022**

**ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ (ಸಿ.ಇ.ಎಸ್.ಸಿ.ಕೆ.) ಯೋಜನಾ ಸಿಬ್ಬಂದಿಯ ಹುದ್ದೆ**

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವು (ಸಿ.ಇ.ಎಸ್.ಸಿ.ಕೆ.) ಭಾರತ ಸರ್ಕಾರದ ಉಪಕ್ರಮವಾಗಿದ್ದು, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನವನ್ನು ನೀಡಿದ ನಂತರ "**ಗುತ್ತಿಗೆ ಆಧಾರ**"ದಲ್ಲಿ ಈ ಕೆಳಗಿನ ಹುದ್ದೆಯನ್ನು ಭರ್ತಿ ಮಾಡಬೇಕಾಗಿದೆ.

ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನ ಸಂಸ್ಥೆಯು ಗುರುತಿಸುವ ವಿವಿಧ ಯೋಜನೆಗಳು ಮತ್ತು ಚಟುವಟಿಕೆಗಳನ್ನು ಸಿ.ಇ.ಎಸ್.ಸಿ.ಕೆ.ಯು ನಿರ್ವಹಿಸಲಿದ್ದು, ಇದರಲ್ಲಿ ಶಾಸ್ತ್ರೀಯ ಕನ್ನಡಕ್ಕೆ ಸಂಬಂಧಿಸಿದ ಸಂಶೋಧನೆ, ದಾಖಲೀಕರಣ, ಪ್ರಚಾರ ಮತ್ತು ಬೋಧನೆ ಸೇರಿವೆ. ಇದು ಭಾರತದ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಮತ್ತು ವಿದೇಶಗಳಲ್ಲಿರುವ ವ್ಯಕ್ತಿಗಳು, ಸಂಸ್ಥೆಗಳು ಕೈಗೊಳ್ಳುವ ಇಂತಹ ಕೆಲಸವನ್ನು ಸಂಯೋಜಿಸುತ್ತದೆ ಮತ್ತು ಪ್ರಪಂಚದ ಇತರೆ ಶಾಸ್ತ್ರೀಯ ಭಾಷೆಗಳಲ್ಲಿ ನಡೆಯುತ್ತಿರುವ ಅಧ್ಯಯನಗಳೊಂದಿಗೂ ಸಂಪರ್ಕ ಸಾಧಿಸುತ್ತದೆ.

| **ಕ್ರ.ಸಂ.** | **ಹುದ್ದೆಯ ಹೆಸರು** | **ಹುದ್ದೆಗಳ ಸಂಖ್ಯೆ** | **ಮಾಸಿಕ ಕ್ರೋಢೀಕೃತ ವೇತನ/ ಗೌರವಧನ** |
|---|---|---|---|
| | **ಶೈಕ್ಷಣಿಕ ಹುದ್ದೆ** | | |
| **1** | **ಯೋಜನಾ ನಿರ್ದೇಶಕರು** | **01** | **Rs.70,000/-** |

**ಯೋಜನೆಯ ನಿರ್ದೇಶಕರು:**

ಯೋಜನಾ ನಿರ್ದೇಶಕರು ಶಾಸ್ತ್ರೀಯ ಕನ್ನಡದ ಅಭಿವೃದ್ಧಿಗಾಗಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರು ಹಾಗೂ ಸಿ.ಇ.ಎಸ್.ಸಿ.ಕೆ.ಯ ನೋಡಲ್ ಅಧಿಕಾರಿಯವರ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಹಾಗೂ ಕರ್ನಾಟಕ ಸರ್ಕಾರದ ಸಮನ್ವಯದೊಂದಿಗೆ ಕೆಲಸ ಮಾಡುತ್ತಾರೆ. ಇವರು ಸಿ.ಇ.ಎಸ್.ಸಿ.ಕೆ.ಯ ವಿವಿಧ ಚಟುವಟಿಕೆಗಳ ಗುರಿಗಳನ್ನು ಯೋಜಿಸಲು ಮತ್ತು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವವರು ಉತ್ತಮ ಗುಣಮಟ್ಟದೊಂದಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಹಾಯ

ಮಾಡುತ್ತಾರೆ ಹಾಗೂ ಅದನ್ನು ಖಚಿತಪಡಿಸಿಕೊಳ್ಳುತ್ತಾರೆ. ಸದರಿ ಹುದ್ದೆಗೆ ನೀಡಲಾಗುವ ಹಣಕಾಸಿನ ಜವಾಬ್ದಾರಿಗಳು ವಿವಿಧ ಚಟುವಟಿಕೆಗಳ ಯೋಜನೆ ಮತ್ತು ಆಯವ್ಯಯವನ್ನು ರೂಪಿಸಲು ಸೀಮಿತವಾಗಿರುತ್ತವೆ. ಇವರು ನೋಡಲ್ ಅಧಿಕಾರಿಯ ಅನುಮೋದನೆಯೊಂದಿಗೆ ಯೋಜನೆಯ 'ಯೋಜನೆ ಹಾಗೂ ನಿರ್ವಹಣಾ ಮಂಡಳಿ (ಪಿ.ಎಂ.ಬಿ.)' ಮತ್ತು ಇತರೆ ಸಭೆಗಳನ್ನು ಕರೆಯಬೇಕಾಗುತ್ತದೆ ಮತ್ತು ಸಂಘಟಿಸಬೇಕಾಗುತ್ತದೆ. ಅಲ್ಲದೆ ಇವರು ಇತರೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು, ಶೈಕ್ಷಣಿಕ ಮತ್ತು ಇತರೆ ಸಂಶೋಧನಾ ಸಂಸ್ಥೆಗಳು ಇತ್ಯಾದಿಗಳೊಂದಿಗೆ ಸಿ.ಇ.ಎಸ್.ಸಿ.ಕೆ.ಯ ಕೆಲಸವನ್ನು ಸಾಕಾರಗೊಳಿಸಲು ಸಂವಹನ ನಡೆಸಬೇಕು.

ಯೋಜನಾ ನಿರ್ದೇಶಕರ ನೇಮಕಾತಿಯು ಗುತ್ತಿಗೆ ಆಧಾರದಲ್ಲಿ ಒಂದು ವರ್ಷದವರೆಗೆ ಇದ್ದು, ವಾರ್ಷಿಕ ಪರಿಶೀಲನೆಗೆ ಒಳಪಟ್ಟಿದ್ದು ಗರಿಷ್ಠ 3 ವರ್ಷಗಳ ಅವಧಿಗೆ ವಿಸ್ತರಿಸಬಹುದಾಗಿರುತ್ತದೆ. ಈ ಹುದ್ದೆಗೆ **ರೂ. 70,000/-** (ನಿಗದಿತ) ಮಾಸಿಕ ಕ್ರೋಢೀಕೃತ ವೇತನವನ್ನು ನೀಡಲಾಗುವುದು. ಈ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಅರ್ಜಿಯನ್ನು ಸ್ವೀಕರಿಸುವ ಕೊನೆಯ ದಿನಾಂಕದಂದು 65 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು .

**ಶೈಕ್ಷಣಿಕ ಅರ್ಹತೆ:** ಕನ್ನಡ ಭಾಷೆಗೆ ಸಂಬಂಧಿಸಿದಂತೆ ಭಾಷಾಶಾಸ್ತ್ರ ಅಥವಾ ಸಾಹಿತ್ಯದಲ್ಲಿ ಡಾಕ್ಟರೇಟ್ ಪದವಿ, ಜೊತೆಗೆ ಕನಿಷ್ಠ 15 ವರ್ಷಗಳ ಸಂಶೋಧನೆ/ಬೋಧನಾ ಅನುಭವ ಮತ್ತು ಪ್ರತಿಷ್ಠಿತ ಸಂಸ್ಥೆ ಅಥವಾ ಶಿಕ್ಷಣ ಸಂಸ್ಥೆಯಲ್ಲಿ ಕನಿಷ್ಠ 3 ವರ್ಷಗಳ ಆಡಳಿತಾತ್ಮಕ ಅನುಭವ ಹೊಂದಿರಬೇಕು.

ಯೋಜನಾ ನಿರ್ದೇಶಕರಿಗೆ ಸಿ.ಇ.ಎಸ್.ಸಿ.ಕೆ.ಯನ್ನು ನಡೆಸಿಕೊಂಡು ಹೋಗಲು ಕೇಂದ್ರ ಸರ್ಕಾರದ ನಿಯಮಗಳು ಮತ್ತು ನಿಬಂಧನೆಗಳ ತಿಳಿವಳಿಕೆ ಅತ್ಯಗತ್ಯ. ಅಭ್ಯರ್ಥಿಗಳು ಸಕ್ರಿಯರಾಗಿದ್ದು ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡುವವರಾಗಿರಬೇಕು ಮತ್ತು ಕೇಂದ್ರವನ್ನು ಅದರ ಗುರಿ ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಮುನ್ನಡೆಸಲು ಸಮರ್ಥರಾಗಿರಬೇಕು. ಇವರು 30 ಡಾಕ್ಟರಲ್ ಮತ್ತು ಪೋಸ್ಟ್-ಡಾಕ್ಟರಲ್ ಫೆಲೋಗಳ ಸಂಶೋಧನಾ ವಿದ್ವಾಂಸರು, ಹಿರಿಯ ಮತ್ತು ಕಿರಿಯ ಫೆಲೋಗಳು ಮತ್ತು 6 ಕಚೇರಿ ಸಿಬ್ಬಂದಿಯೊಂದಿಗೆ ಸಮನ್ವಯ ಹಾಗೂ ಮೇಲ್ವಿಚಾರಣೆಯೊಂದಿಗೆ ಕೆಲಸ ಮಾಡಬೇಕಾಗುತ್ತದೆ.

**ಅಪೇಕ್ಷಣೀಯ:** ಕನ್ನಡ ಶಾಸ್ತ್ರೀಯ ಭಾಷೆಯ ತಿಳಿವಳಿಕೆಯುಳ್ಳವರಿಗೆ ಆದ್ಯತೆ.

**ಯೋಜನಾ ನಿರ್ದೇಶಕರ ಜವಾಬ್ದಾರಿಗಳು ಮತ್ತು ಕರ್ತವ್ಯಗಳು:**

i. ಯೋಜನಾ ನಿರ್ದೇಶಕರು ಸಿ.ಇ.ಎಸ್.ಸಿ.ಕೆ.ಯ ಮುಖ್ಯಸ್ಥರಾಗಿದ್ದರೂ ಸಹ ಸಿ.ಇ.ಎಸ್.ಸಿ.ಕೆ.ಯ ಹಣಕಾಸು ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಯು ಮಂಜೂರು ಮಾಡುವ

ಅಧಿಕಾರಿಯಾಗಿದ್ದು ಇವರು ಕೇಂದ್ರದ ಕೆಲಸಗಳನ್ನು ಅನುಷ್ಠಾನಗೊಳಿಸುತ್ತಾರೆ, ಹೀಗಾಗಿ ಯೋಜನಾ ನಿರ್ದೇಶಕರು ನೋಡಲ್ ಅಧಿಕಾರಿಯಾಗಿರುವ ಭಾರತೀಯ ಭಾಷಾ ಸಂಸ್ಥೆಯ ನಿರ್ದೇಶಕರಿಗೆ ವರದಿ ಮಾಡಿಕೊಳ್ಳಬೇಕಾಗುತ್ತದೆ.

ii. ನೋಡಲ್ ಅಧಿಕಾರಿಯ ಪರವಾಗಿ ಸಿ.ಇ.ಎಸ್.ಸಿ.ಕೆ.ಯ ಯೋಜನಾ ನಿರ್ದೇಶಕರು ಪಿ.ಎಂ.ಬಿ.ಯ ನಿರ್ಧಾರಗಳನ್ನು ಮೇಲ್ವಿಚಾರಣೆ ಮಾಡುತ್ತಾರೆ ಹಾಗೂ ಜಾರಿಗೊಳಿಸುತ್ತಾರೆ. ಇವರು ಯೋಜನೆಯಲ್ಲಿ ಸಾಧಿಸಿದ ಪ್ರಗತಿಯ ಕುರಿತು ಮಾಸಿಕ ವರದಿಯನ್ನು ಪೂರ್ಣಗೊಂಡ ತಿಂಗಳ ನಂತರದ 3ನೇ ದಿನ ಅಥವಾ ಮುಂದಿನ ಕೆಲಸದ ದಿನದೊಳಗೆ ನೋಡಲ್ ಅಧಿಕಾರಿಗೆ ನೀಡಬೇಕಾಗುತ್ತದೆ.

iii ಸಿ.ಇ.ಎಸ್.ಸಿ.ಕೆ.ಯ ಯೋಜನಾ ನಿರ್ದೇಶಕರು ನೋಡಲ್ ಅಧಿಕಾರಿಯ ಅನುಮೋದನೆಯೊಂದಿಗೆ ಪಿ.ಎಂ.ಬಿ. ಸಭೆಗಳೂ ಸೇರಿದಂತೆ ಸಿ.ಇ.ಎಸ್.ಸಿ.ಕೆ.ಯ ಸಭೆಗಳನ್ನು ಕರೆಯಬೇಕಾಗುತ್ತದೆ.

iv. ಸಿ.ಇ.ಎಸ್.ಸಿ.ಕೆ.ಯ ಯೋಜನಾ ನಿರ್ದೇಶಕರು ಸಿ.ಇ.ಎಸ್.ಸಿ.ಕೆ.ಗಾಗಿ ಆಯವ್ಯಯವನ್ನು ರೂಪಿಸಬೇಕಾಗುತ್ತದೆ.

v. ಸಿ.ಐ.ಐ.ಎಲ್. ಸಂಸ್ಥೆಯು ಯೋಜನಾ ನಿರ್ದೇಶಕರಿಗೆ ಹುದ್ದೆಯ ಅಧಿಕಾರ ವಹಿಸಿಕೊಡುವುದರಿಂದ ಇವರು ಸಿ.ಇ.ಎಸ್.ಸಿ.ಕೆ.ಯ /ಸಿ.ಐ.ಐ.ಎಲ್.ನ ದಾಖಲೆಗಳು ಮತ್ತು ಪ್ರಕಟಣೆಗಳು/ಇ-ಪ್ರಕಟಣೆಗಳು ಮತ್ತು ಇತರೆ ಸ್ವತ್ತುಗಳ ರಕ್ಷಕರಾಗಿರುತ್ತಾರೆ.

vi. ಸಿ.ಇ.ಎಸ್.ಸಿ.ಕೆ.ಯ ಯೋಜನಾ ನಿರ್ದೇಶಕರು ಆಗಾಗ ಕರಾರುಗಳು, ಸಹಯೋಗದ ಉದ್ದೇಶಗಳು, MOUಗಳು ಮತ್ತು ನಿಯೋಜನಾ ಕಾರ್ಯಗಳನ್ನು ಮಾಡಲು ಹಿನ್ನೆಲೆ-ಕೆಲಸ ಮತ್ತು ಪತ್ರವ್ಯವಹಾರವನ್ನು ಮಾಡಬೇಕಾಗುತ್ತದೆ.

vii. ಸಿ.ಇ.ಎಸ್.ಸಿ.ಕೆ.ಯ ಯೋಜನಾ ನಿರ್ದೇಶಕರು ನೋಡಲ್ ಅಧಿಕಾರಿಯು ಕಾಲಕಾಲಕ್ಕೆ ನಿಯೋಜಿಸಲಾಗುವ ಯಾವುದೇ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ.

**ನಿಯಮಗಳು ಮತ್ತು ನಿಬಂಧನೆಗಳು:**

01. ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವು ಭಾರತ ಸರ್ಕಾರದ ಉಪಕ್ರಮವಾಗಿದ್ದು ಗುತ್ತಿಗೆ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಿದೆ.

02. ಸಿ.ಐ.ಐ.ಎಲ್ ನಿರ್ದೇಶಕರು ಸಿ.ಇ.ಎಸ್.ಸಿ.ಕೆ.ಯ ಯೋಜನಾ ಸಿಬ್ಬಂದಿಯ ನೇಮಕಾತಿ ಪ್ರಾಧಿಕಾರವಾಗಿದ್ದು, ಇವರು ನೇಮಕವಾದ ಸಿಬ್ಬಂದಿಯ ಸೇವೆಯು ಅತೃಪ್ತಿಕರವಾಗಿ ಕಂಡುಬಂದಲ್ಲಿ ಅಥವಾ ತಮ್ಮ ಅಧಿಕಾರ ಅಥವಾ ಹಣದ ದುರುಪಯೋಗದಲ್ಲಿ ಭಾಗಿಯಾಗಿರುವುದು ಕಂಡುಬಂದರೆ ಹುದ್ದೆಯಿಂದ ತೆಗೆದುಹಾಕುವ ಅಧಿಕಾರವನ್ನು ಸಹ ಹೊಂದಿರುತ್ತಾರೆ.

03. ಆಡಳಿತಾತ್ಮಕ ಸಿಬ್ಬಂದಿಯ ಅಧಿಕಾರಾವಧಿಯು ಆರಂಭದಲ್ಲಿ ಒಂದು ವರ್ಷದ ಅವಧಿಗೆ ಇರುತ್ತದೆ ಮತ್ತು ವಾರ್ಷಿಕವಾಗಿ ಅವರ ಕಾರ್ಯಕ್ಷಮತೆ ಮತ್ತು ಪರಿಶೀಲನೆಯ ಆಧಾರದ ಮೇಲೆ ಮತ್ತಷ್ಟು ವಿಸ್ತರಿಸಬಹುದು.

04. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸಾರಾಂಶ ಮತ್ತು ಲಗತ್ತುಗಳೊಂದಿಗೆ **ನಿರ್ದೇಶಕರು, ಭಾರತೀಯ ಭಾಷಾ ಸಂಸ್ಥಾನ (ಸಿ.ಐ.ಐ.ಎಲ್.) ಮಾನಸಗಂಗೋತ್ರಿ, ಹುಣಸೂರು ರಸ್ತೆ, ಮೈಸೂರು - 570006 ಇವರಿಗೆ ಕಳುಹಿಸಬಹುದು.**

05. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಆನ್‌ಲೈನ್ ಅಪ್ಲಿಕೇಶನ್ ಪೋರ್ಟಲ್‌ನಲ್ಲಿ https://apply.ciil.org ಮೂಲಕ ಲಗತ್ತುಗಳನ್ನು ಸಲ್ಲಿಸಬಹುದು ಅಥವಾ ಇ-ಮೇಲ್ ಮೂಲಕ ada-ciilmys@gov.in ಸಲ್ಲಿಸಬಹುದು.

06. ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ 15 ಆಗಸ್ಟ್ 2022.

07. ನಿಗದಿತ ದಿನಾಂಕದ ನಂತರ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

08. **ಅರ್ಜಿಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ ಮತ್ತು ಸಂಸ್ಥೆಯ ನಿರ್ಧಾರವು ಅಂತಿಮವಾಗಿರುತ್ತದೆ.**

09. ಅತ್ಯುತ್ತಮವಾದ ಅರ್ಹ ಅಭ್ಯರ್ಥಿಗಳ ಲಭ್ಯತೆಯ ಸಂದರ್ಭದಲ್ಲಿ ಅರ್ಹತೆಯ ಮಾನದಂಡದಲ್ಲಿ ವಿನಾಯ್ತಿ ನೀಡುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿದೆ.

10. ಅಪೂರ್ಣ ಅರ್ಜಿ ಮತ್ತು ನಿಗದಿತ ದಿನಾಂಕದ ನಂತರ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

11. ಈಗಾಗಲೇ ಸೇವೆಯಲ್ಲಿರುವವರು ತಮ್ಮ ಅರ್ಜಿಗಳನ್ನು ತಮ್ಮ ಉದ್ಯೋಗದಾತರ ಮತ್ತು ನಿಗದಿತ ದಿನಾಂಕದೊಳಗೆ ಕೆಳಗೆ ಸಹಿ ಮಾಡಿದವರಿಗೆ ತಲುಪುವಂತೆ ಕಳುಹಿಸಬಹುದು.

12. ಸಂದರ್ಶನಕ್ಕೆ ಹಾಜರಾಗಲು ಯಾವುದೇ TA/DA ಯನ್ನು ಪಾವತಿಸಲಾಗುವುದಿಲ್ಲ.

13. ಅರ್ಜಿ ನಮೂನೆಯನ್ನು ಸಿ.ಐ.ಐ.ಎಲ್. ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು (www.ciil.org)

14.ಅಭ್ಯರ್ಥಿಯ ಆಯ್ಕೆ ಅಥವಾ ಇತರೆ ವಿಷಯಗಳಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಸಕ್ಷಮ ಪ್ರಾಧಿಕಾರದ ನಿರ್ಧಾರವು ಅಂತಿಮವಾಗಿರುತ್ತದೆ.

**ಕೆಲಸದ ಸ್ಥಳ:** ಮೈಸೂರು, ಕರ್ನಾಟಕ

**ಮೇಲಿನ ಹುದ್ದೆಯ ಆಯ್ಕೆಗಾಗಿ ಸಂದರ್ಶನದ ಸ್ಥಳ:** ಅರ್ಹ ಮತ್ತು ಪಟ್ಟಿ ಮಾಡಲಾದ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಯೋಜನೆಗೆ ಅಗತ್ಯವಿರುವ ಎಲ್ಲಾ ಹುದ್ದೆಗಳಿಗೆ ವಿವರವಾದ ಅಧಿಸೂಚನೆ

| ಕ್ರ.ಸಂ. | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆಗಳು | ಮಾಸಿಕ ಕ್ರೋಢೀಕೃತ ವೇತನ/ ಗೌರವಧನ | ವಯಸ್ಸಿನ ಮಿತಿ | ಶೈಕ್ಷಣಿಕ ಮತ್ತು ಇತರೆ ವಿದ್ಯಾರ್ಹತೆ | ಇತರೆ |
|---|---|---|---|---|---|---|
| | | | | | | |
| **ಶೈಕ್ಷಣಿಕ ಹುದ್ದೆಗಳು** | | | | | | |
| 1 | ಯೋಜನಾ ನಿರ್ದೇಶಕರು | 01 | 70,000 | 65 ವರ್ಷ ಮೀರಿರಬಾರದು | **ಶೈಕ್ಷಣಿಕ ಅರ್ಹತೆ:**<br>1) ಕನ್ನಡ ಭಾಷೆಗೆ ಸಂಬಂಧಿಸಿದಂತೆ ಭಾಷಾಶಾಸ್ತ್ರ ಅಥವಾ ಸಾಹಿತ್ಯದಲ್ಲಿ ಡಾಕ್ಟರೇಟ್ ಪದವಿ, ಜೊತೆಗೆ ಕನಿಷ್ಠ 15 ವರ್ಷಗಳ ಸಂಶೋಧನೆ/ಬೋಧನಾ ಅನುಭವ ಮತ್ತು ಪ್ರತಿಷ್ಠಿತ ಸಂಸ್ಥೆ ಅಥವಾ ಶಿಕ್ಷಣ ಸಂಸ್ಥೆಯಲ್ಲಿ ಕನಿಷ್ಠ 3 ವರ್ಷಗಳ ಆಡಳಿತಾತ್ಮಕ ಅನುಭವ.<br>2) ಸಿ.ಇ.ಎಸ್.ಸಿ.ಕೆ.ಯನ್ನು ನಡೆಸಿಕೊಂಡು ಹೋಗಲು ಕೇಂದ್ರ ಸರ್ಕಾರದ ನಿಯಮಗಳು ಮತ್ತು ನಿಬಂಧನೆಗಳ ತಿಳಿವಳಿಕೆ ಅತ್ಯಗತ್ಯ. ಅಭ್ಯರ್ಥಿಗಳು ಕ್ರಿಯಾತ್ಮಕರಾಗಿದ್ದು ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡುವವರಾಗಿರಬೇಕು ಮತ್ತು ಕೇಂದ್ರವನ್ನು ಅದರ ಗುರಿ ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಮುನ್ನಡೆಸಲು ಸಮರ್ಥರಾಗಿರಬೇಕು. ಇವರು 30 ಡಾಕ್ಟರಲ್ ಮತ್ತು ಪೋಸ್ಟ್-ಡಾಕ್ಟರಲ್ ಫೆಲೋಗಳ ಸಂಶೋಧನಾ ವಿದ್ವಾಂಸರು, ಹಿರಿಯ ಮತ್ತು ಕಿರಿಯ ಫೆಲೋಗಳು ಮತ್ತು 6 ಕಚೇರಿ ಸಿಬ್ಬಂದಿಯೊಂದಿಗೆ ಸಮನ್ವಯ ಹಾಗೂ ಮೇಲ್ವಿಚಾರಣೆಯೊಂದಿಗೆ ಕೆಲಸ ಮಾಡಬೇಕಾಗುತ್ತದೆ. | |